# ವಿಶ್ವ ಕನ್ನಡ ಸಮ್ಮೇಳನ ನಗಾರಿ



‘ಕಾವೇರಿ’ ಕನ್ನಡ ಸಂಘ ಮತ್ತು ‘ಅಕ್ಕ’ ಸಹಯೋಗದಲ್ಲಿ

## 4ನೇ ವಿಶ್ವ ಕನ್ನಡ ಸಮ್ಮೇಳನ

(2006 ಸಪ್ಟೆಂಬರ್ 1 , 2 ಮತ್ತು 3. ಬಾಲ್ಟಿಮೋರ್ ಕನ್ವೆನ್ಷನ್ ಸೆಂಟರ್)

ವಾರ್ತಾಪ್ರಕಟಣೆ–ಜುಲೈ 13, 2006

* * * * * * * * * * * * * * * * * * * * * * * * * * * * * * * * * * * * * * * * * * * * * * * * * * * * * * *

## ’ಆನಂದ್ ಆಡಿಯೊ’ ಪ್ರಾಯೋಜಿಸುವ AKKA IDOL ಸ್ಪರ್ಧೆ!

ಕನ್ನಡ ಜನಪದಗೀತೆ, ಸುಗಮಸಂಗೀತ, ಚಿತ್ರಗೀತೆ ಹಾಡುವ ಹವ್ಯಾಸಿ/ಅಭ್ಯಾಸಿ ಗಾನಕೋಗಿಲೆಗಳಿಗೆ ಚಿನ್ನದಂಥ ಅವಕಾಶ! ಇದೇ ಮೊದಲ ಬಾರಿಗೆ AKKA IDOL ಸ್ಪರ್ಧೆ ಈ ಬಾರಿಯ ವಿಶ್ವ ಕನ್ನಡ ಸಮ್ಮೇಳನದಲ್ಲಿ!! ಸಮ್ಮೇಳನಕ್ಕೆ ನೋಂದಾಯಿಸಿದವರೆಲ್ಲರೂ ಯಾವುದೇ ತಾರತಮ್ಯವಿಲ್ಲದೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ. ಸ್ಪರ್ಧಿಗಳಾಗಲು ಇಚ್ಛಿಸುವವರು ಮಾಡಬೇಕಾದ್ದಿಷ್ಟೇ: ಸುಗಮಸಂಗೀತ, ಜನಪದಗೀತೆ ಮತ್ತು ಚಲನಚಿತ್ರಗೀತೆ – ಈ ಮೂರು ಪ್ರಕಾರಗಳಲ್ಲೂ ನಿಮ್ಮ ಕಂಠಸಿರಿಯಲ್ಲಿ ಒಂದೊಂದು ಹಾಡನ್ನು ಧ್ವನಿಮುದ್ರಿಸಿ ಅದರ ಟೇಪ್ ಅಥವಾ ಸಿಡಿಯನ್ನು ಕಳಿಸಿ.

ವಿಳಾಸ: **AKKA IDOL Contest, 18405 Broad Leaf Road, Boyds Maryland 20841, USA**

ಆಗಸ್ಟ್ 1, 2006ರ ನಂತರದ ಅಂಚೆಮುದ್ರೆಯಿರುವ ಪ್ರವೇಶಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ಸ್ಪರ್ಧೆಯ ಎರಡನೆ ಸುತ್ತನ್ನು ಪ್ರವೇಶಿಸಿದವರ ಹೆಸರುಗಳನ್ನು ಸಮ್ಮೇಳನದಲ್ಲಿ ಸಪ್ಟೆಂಬರ್ 1ರಂದು ಪ್ರಕಟಿಸಲಾಗುವುದು. ಸಮ್ಮೇಳನಸಮಿತಿಯು ನೇಮಿಸಿದ ತೀರ್ಪುಗಾರರ ಸಮ್ಮುಖದಲ್ಲಿ ಸಪ್ಟೆಂಬರ್ 2ರಂದು ಈ ಸುತ್ತಿನ ಸ್ಪರ್ಧೆ ನಡೆಯುತ್ತದೆ. ಅದರಲ್ಲಿ ಇಬ್ಬರು ಸ್ಪರ್ಧಿಗಳು ಮಾತ್ರ ಅಂತಿಮ ಸುತ್ತನ್ನು ಪ್ರವೇಶಿಸಲು ಆಯ್ಕೆಯಾಗುತ್ತಾರೆ. ಅಂತಿಮ ಸುತ್ತನ್ನು ಪ್ರವೇಶಿಸಿದ ಈ ಈರ್ವರು ಸ್ಪರ್ಧಿಗಳು ಸಮ್ಮೇಳನದಲ್ಲಿ ‘ಗುರುಕಿರಣ್ ರಸಮಂಜರಿ’ ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಹಾಡುವ ಅವಕಾಶವನ್ನು ಪಡೆಯುತ್ತಾರೆ. ಪೂರ್ವನಿಯೋಜಿತ ಸಭಿಕರು ಈರ್ವರಲ್ಲಿ ಒಬ್ಬರನ್ನು AKKA IDOL ಆಗಿ ಚುನಾಯಿಸುತ್ತಾರೆ. ವಿಜೇತರಿಗೆ ಬಹುಮಾನವಾಗಿ AKKA IDOL ಕಿರೀಟವಷ್ಟೇ ಅಲ್ಲದೆ ಆನಂದ್ ಆಡಿಯೋ ಕಂಪೆನಿಯ ಧ್ವನಿಮುದ್ರಿಕೆಗಳಲ್ಲಿ ಹಾಡುವ ಅವಕಾಶದ ಬಂಪರ್ ಬಹುಮಾನವೂ ಸಲ್ಲುತ್ತದೆ!

## ಕರ್ನಾಟಕದ ಜಿಲ್ಲೆಗಳನ್ನು ಪ್ರತಿನಿಧಿಸುವ ಮೆರವಣಿಗೆ!

ಸಮ್ಮೇಳನದ ಒಂದು ಪ್ರಮುಖ ಆಕರ್ಷಣೆಯಾಗಿ, ಕರ್ನಾಟಕದ ಎಲ್ಲ ಜಿಲ್ಲೆಗಳನ್ನೂ ಪ್ರತಿನಿಧಿಸುವ ರಂಗುರಂಗಿನ ಭವ್ಯ ಮೆರವಣಿಗೆಯೊಂದು ಆಯೋಜಿತವಾಗಿದೆ. ಉತ್ತರ ಅಮೆರಿಕದಾದ್ಯಂತದ ವಿವಿಧ ಕನ್ನಡ ಕೂಟಗಳು ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಲು ಆಸಕ್ತಿ ತೋರಿದ್ದು ಇದೊಂದು ಅಭೂತಪೂರ್ವ ದೃಶ್ಯವೈಭವವಾಗಲಿದೆ. ಮೆರವಣಿಗೆಯಲ್ಲಿ ನಿಮ್ಮ ಜಿಲ್ಲೆ ಹೆಚ್ಚು ’ಮಿಂಚಿಂಗ್’ ಆಗಬೇಕು ಎಂದು ಸಹಜವಾಗಿಯೇ ನಿಮ್ಮ ಅಪೇಕ್ಷೆಯಲ್ಲವೆ? ನಿಮ್ಮ ಜಿಲ್ಲೆಯನ್ನು ಪ್ರತಿನಿಧಿಸುವ ಕನ್ನಡಕೂಟವು ನಿಮ್ಮೂರಿನದಲ್ಲದಿದ್ದರೂ ನಿಮ್ಮ ಜಿಲ್ಲೆಯನ್ನು ಪ್ರಾಯೋಜಿಸುವ ಮೂಲಕ ಮೆರವಣಿಗೆಯಲ್ಲಿ ನಿಮ್ಮ ಅಭಿಮಾನದ ಪಾಲ್ಗೊಳ್ಳುವಿಕೆಗೆ ಅವಕಾಶವಿದೆ. ಜಿಲ್ಲಾವಾರು ಪಟ್ಟಿಯಲ್ಲಿ ಎಲ್ಲ ಪ್ರಾಯೋಜಕರ ಹೆಸರು ಮತ್ತು ಸ್ವಂತಊರುಗಳ ಹೆಸರನ್ನು ಸಮ್ಮೇಳನದ ವೆಬ್‌ಸೈಟ್‌ನಲ್ಲಿ ಮತ್ತು ಸಭಾಂಗಣದ ಫಲಕದಲ್ಲಿ ಪ್ರಕಟಿಸಲಾಗುವುದು.

ಇನ್ನೇಕೆ ತಡ, 100ಡಾಲರ್ ದೇಣಿಗೆಯ ಮೂಲಕ ನಿಮ್ಮ ಜಿಲ್ಲೆಯನ್ನು ಇಂದೇ ಪ್ರಾಯೋಜಿಸುವೆನೆನ್ನಿ, ಕನ್ನಡತೇರನೆಳೆಯೋಣ ಬನ್ನಿ!

*ವಿವರಗಳಿಗೆ ಸಂಪರ್ಕಿಸಿ:*

ಸವಿತಾ ರಾವ್: ✆ 301–502–8012; ✉ kurchi123@yahoo.com

ನಾಗರಾಜ ರೆಡ್ಡಿ: ✆ 443–745–3172; ✉ nmreddi@msn.com

ಹರಿದಾಸ್‌ಲಹರಿ: ✆ 703–362–5175; ✉ Laharidas@hotmail.com

## ಜೆಎಸ್‌ಎಸ್/ಜೆಸಿಇ ಹಳೆವಿದ್ಯಾರ್ಥಿಗಳ ಸಮ್ಮಿಲನ

ಭಾರತದಾದ್ಯಂತ ಸುಮಾರು 270ಕ್ಕೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತಿರುವ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠವು, ಆ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದು ಈಗ ದೇಶವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರನ್ನು ನಾಲ್ಕನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸುವಂತೆ ವಿಶೇಷವಾಗಿ ಆಮಂತ್ರಿಸಿದೆ. ಈಬಾರಿಯ ಸಮ್ಮೇಳನದಲ್ಲಿ ಜೆಎಸ್‌ಎಸ್/ಜೆಸಿಇ ಹಳೆವಿದ್ಯಾರ್ಥಿಗಳದೇ ಒಂದು ವಿಶೇಷ ಅಧಿವೇಶನ ನಡೆಯಲಿದ್ದು, ಹಳೆಯ ಸ್ನೇಹಿತರು ಮತ್ತು ಸಹಪಾಠಿಗಳನ್ನು ಭೇಟಿಯಾಗಲು, ವಿದ್ಯಾರ್ಥಿದಿನಗಳ ನೆನಪುಗಳನ್ನು ತಾಜಾಗೊಳಿಸಲು, ಜೆಎಸ್‌ಎಸ್ ವಿದ್ಯಾಪೀಠವು ಶೈಕ್ಷಣಿಕ/ಸಾಮಾಜಿಕ ರಂಗಗಳಲ್ಲಿ ಸಾಧಿಸಿರುವ ಪ್ರಗತಿಪರ ಯೋಜನೆಗಳ ಬಗ್ಗೆ ತಿಳಿದುಕೊಳ್ಳಲು ಇದೊಂದು ಸುವರ್ಣಾವಕಾಶ.

ಇಷ್ಟೇ ಅಲ್ಲದೆ ಮೇರಿಲ್ಯಾಂಡ್ ಸಂಸ್ಥಾನದ ಗೈಥರ್ಸ್‌ಬರ್ಗ್‌ನಲ್ಲಿ JSS Spiritual Missionನ ಸ್ಥಾಪನೆಯಾಗಿದ್ದು ಉತ್ತರ ಅಮೆರಿಕದಲ್ಲಿರುವ ಜೆಎಸ್‌ಎಸ್ ಹಳೆವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ, ಯೋಗ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸ್ನೇಹಸಂಪರ್ಕದ ಕೇಂದ್ರವಾಗಿ ಇದು ಹೊರಹೊಮ್ಮಲಿದೆಯೆಂದು ಮಹಾವಿದ್ಯಾಪೀಠದ ಪ್ರಕಟಣೆ ತಿಳಿಸಿದೆ.

*ವಿವರಗಳಿಗೆ ಸಂಪರ್ಕಿಸಿ:*

ಕುಮಾರ್ ರಾಜಶೇಖರ್ kumar@jssmission.org or jss@jssmission.org

ವೆಬ್‌ಸೈಟ್ ವಿಳಾಸ: www.jssonline.org ಮತ್ತು www.jssmission.org

* * * * * * * * * * * * * * * * * * * * * * * * * * * * * * * * * * * * * * * * * * * * * * * * * * * * * * *

*ಇದು 4ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದ ’ವಾರ್ತಾ ಮತ್ತು ಪ್ರಚಾರ’ ಸಮಿತಿಯ ಪ್ರಕಟಣೆ. ಸಂಯೋಜನೆ: ಶ್ರೀವತ್ಸ ಜೋಶಿ*

ಸಮ್ಮೇಳನದ ಅಧಿಕೃತ ಜಾಲತಾಣ: **www.akkaonline.org/2006** ವಿ–ಅಂಚೆ: **wkc2006@gmail.com**

ಸಂಪರ್ಕ ವಿಳಾಸ: **AKKA WKC 2006, 451 Hungerford Drive, #119-341, Rockville, MD 20850 USA** ದೂರವಾಣಿ ಮತ್ತು ಫ್ಯಾಕ್ಸ್: **1-877-WKC-2006**